# ಬೆಳೆ ಬೆಂಬಲ ಘೋಷಣೆ ಕಾಯಿದೆಗೆ ಆಗ್ರಹ

**ವಿಕ ಸುದ್ದಿಲೋಕ** ತೀರ್ಥಹಳ್ಳಿ

ಬೆಳೆ ಬೆಂಬಲ ಬೆಲೆ ಘೋಷಣೆಯನ್ನು ಕಾನೂನು ಕ್ರಮದ ವ್ಯಾಪ್ತಿಗೆ ಒಳಪಡಿಸಬೇಕಿದ್ದು ಕೇಂದ್ರ, ರಾಜ್ಯ ಸರಕಾರ ಹೊಸದಾಗಿ ಕಾಯಿದೆ ರಚಿಸಬೇಕಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ ಕಮ್ಮರಡಿ ಆಗ್ರಹಿಸಿದರು.

ಶನಿವಾರ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬೆಂಬಲಬೆಲೆಗೆ ಕಾನೂನು ರಕ್ಷಣೆ ಇಲ್ಲದಿದ್ದರೆ ಪ್ರಯೋಜನವಾಗದು. ಎಪಿಎಂಸಿ ನಿಯಮಕ್ಕೆ ರಾಜ್ಯ ಸರಕಾರ, ಅಗತ್ಯವಸ್ತುಗಳ ಖರೀದಿ ನಿಯಮಕ್ಕೆ ಕೇಂದ್ರ ಸರಕಾರ ತಿದ್ದುಪಡಿ ತರಬೇಕಿದ್ದು ಸಮಗ್ರ ಮಾಹಿತಿ ಒದಗಿಸಲಾಗಿದೆ. ಈ ಸಾಲಿನ ಬೆಳೆವಾರು ಬೆಲೆ ಕುರಿತು ಸರಕಾರಕ್ಕೆ ಡಿಸೆಂಬರ್ 29ರಂದು ವರದಿ ಸಲ್ಲಿಸಲಾಗಿದೆ. ಬೆಳೆ ಉತ್ಪಾದನೆ, ಹೆಚ್ಚಳ, ಕುಸಿತ, ಬೆಲೆ ಏರಿಳಿಕೆ ಕುರಿತ ಸಮಗ್ರ ಮಾಹಿತಿ ವರದಿಯಲ್ಲಿದೆ ಎಂದರು.



ಮುಂದಿನ 6 ತಿಂಗಳಲ್ಲಿ ಭತ್ತ, ರಾಗಿ, ಕಡಲೆ, ಹತ್ತಿ ಬೆಳೆಗೆ ಉತ್ತಮ ಧಾರಣೆ ಸಿಗಬಹುದಾಗಿದೆ. ತೊಗರಿ, ಶೇಂಗಾ, ಮುಸುಕಿನಜೋಳ, ಸೋಯಾ, ದವಸಧಾನ್ಯಗಳಾದ ಹೆಸರು, ಉದ್ದು ಬೆಲೆ ಕುಸಿಯುವ ಸಾಧ್ಯತೆ ಹೆಚ್ಚಿದೆ. ಮುಸುಕಿನಜೋಳಕ್ಕೆ ಬೆಂಬಲ ಬೆಲೆ ಸಾಧ್ಯವಿಲ್ಲ, ಸಾರ್ವಜನಿಕ ಪಡಿತರ ವಿತರಣೆ ಕ್ರಮದಲ್ಲಿ ಮುಸುಕಿನ ಜೋಳ ಬಳಸಬೇಕೆಂದು ಕೇಂದ್ರ ಸರಕಾರದ ಸೂಚನೆ ತೊಡಕು ಉಂಟುಮಾಡಿದೆ ಎಂದು ಪ್ರಕಾಶ್ ಕಮ್ಮರಡಿ ಹೇಳಿದರು.

ಮಾರುಕಟ್ಟೆ ವ್ಯವಸ್ಥೆ ನಿರ್ಮಾಣಕ್ಕೆ ಎಪಿಎಂಸಿಗಳು ಶ್ರಮಿಸಬೇಕಿದೆ. ಜಿಎಸ್‌ಟಿ, ನೋಟು ನಿಷೇಧ ಕ್ರಮದಿಂದ ಅನೇಕ ತೊಂದರೆ ಆಗುತ್ತಿದ್ದು ಸುಧಾರಣೆ ಅಗತ್ಯವಾಗಿದೆ. ರಾಜ್ಯ ಕೃಷಿ ಬೆಲೆ ಆಯೋಗದ ಕಾರ್ಯ ನಿರ್ವಹಣೆಗೆ ಕೇಂದ್ರದ ನೀತಿ ಆಯೋಗ ಮೆಚ್ಚಿಕೊಂಡಿದ್ದು ರಾಷ್ಟ್ರವ್ಯಾಪ್ತಿ ರಚನೆಗೆ ಸೂಚನೆ ನೀಡಿದೆ. ವಿಶ್ವದಲ್ಲಿ ಪ್ರಥಮವಾಗಿ ಮೈಕ್ರೋಸಾಫ್ಟ್ ಸಂಸ್ಥೆ ಜತೆ ಒಪ್ಪಂದ ತಂತ್ರಾಂಶದಿಂದ ಮುಂದಿನ 6ತಿಂಗಳಿಗೆ 26 ಬೆಳೆಗಳ ಬೆಲೆ ಅಂದಾಜು ಸಮಗ್ರ ಪಟ್ಟಿ ಅಭಿವೃದ್ಧಿಪಡಿಸಲಾಗಿದೆ. ಜನವರಿ 1ರಿಂದ ಆಯೋಗದ ವೆಬ್‌ಸೈಟ್‌ನಲ್ಲಿ ಬೆಲೆ ಕುರಿತು ಮಾಹಿತಿ ಪಡೆಯಬಹುದು ಎಂದರು.

ಸರಕಾರಗಳು ರೈತರ ಬಗ್ಗೆ ವಿಶೇಷ ಗಮನ ಹರಿಸಬೇಕಿದೆ. ಈರುಳ್ಳಿ ಬೆಲೆ ಏರಿದ ತಕ್ಷಣ ಬೆಲೆ ಇಳಿಕೆಗೆ ಸರಕಾರ ಆಮದಿಗೆ ಅವಕಾಶ ನೀಡಿದರೆ ದೇಶದ ರೈತರಿಗೆ ಅನ್ಯಾಯವಾಗುತ್ತದೆ. ಅಡಕೆಗೆ ಬೆಂಬಲ ಬೆಲೆ ಘೋಷಿಸಿ ಧಾರಣೆ ಕುಸಿಯದಂತೆ ತಡೆಯಲಾಗಿದೆ ಎಂದರು.

ತೋಟಗಾರಿಕೆ, ಕೃಷಿ ಇಲಾಖೆ ಯೋಜನೆ ತಲುಪಿಸಲು ರೈತರ ಆದಾಯ ಮತ್ತು ಕಲ್ಯಾಣವೃದ್ಧಿ ಪೈಲೆಟ್ ಯೋಜನೆ ಹಮ್ಮಿಕೊಳ್ಳಲಾಗುತ್ತದೆ. ಯೋಜನೆಗಳು ತಲುಪಿರುವ ಕುರಿತು ಮಾಹಿತಿ ಒದಗಿಸಲು ಈ ಹಿಂದೆ ಡಿಸಿ ನೇತೃತ್ವದ ಸಮಿತಿ ಗಡುವು ನೀಡಿದರೂ ಮಾಹಿತಿ ನೀಡಿಲ್ಲ. ಭತ್ತ ಕೃಷಿ ಪ್ರೋತ್ಸಾಹಕ್ಕಾಗಿ ಭತ್ತ ಉತ್ಪಾದಕ ಸಂಘಗಳ ರಚಿಸಲಾಗುತ್ತದೆ. ಜನವರಿ 3ನೇವಾರ ಬೆಂಗಳೂರಲ್ಲಿ ಅಂತಾರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಾಶ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ತೀರ್ಥಹಳ್ಳಿ ಎಪಿಎಂಸಿ ಅಧ್ಯಕ್ಷ ಕೇಳೂರುಮಿತ್ರಾ, ಉಪಾಧ್ಯಕ್ಷೆ ಮೈತ್ರಿಸತೀಶ್, ನಿರ್ದೇಶಕ ಹಸಿರುಮನೆಮಹಾಬಲೇಶ್. ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳಿದ್ದರು.

**ಅಡಕೆ, ಕಾಳುಮೆಣಸಿಗೆ ಆನ್‌ಲೈನ್ ಟ್ರೇಡಿಂಗ್**

**ರಾಜ್ಯದಲ್ಲಿ 10 ವರ್ಷದಿಂದೀಚೆಗೆ ಶೇ.32ರಷ್ಟು ಭತ್ತ ಬೆಳೆ ಕುಸಿತಕಂಡಿದ್ದು 4.7ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿಲ್ಲ. ನಾಟಿ ತಳಿ ಸಂರಕ್ಷಣೆಗಾಗಿ ಕೇರಳ ಮಾದರಿ ಪ್ಯಾಕೇಜ್ ಘೋಷಣೆಗೆ ಬೇಡಿಕೆ ಸಲ್ಲಿಸಲಾಗಿದೆ. ಅಡಕೆ, ಕಾಳು ಮೆಣಸು ಖರೀದಿಗೆ ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆ ಮಾಡಲಾಗುತ್ತಿದೆ.**

**-ಡಾ.ಟಿ.ಎನ್.ಪ್ರಕಾಶ್‌ಕಮ್ಮರಡಿ**

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » SHIVAMOGGA

ಟಾಪ್ ನ್ಯೂಸ್

**ಯುವಕನ ಮೇಲೆ ಆನೆದಾಳಿ**

ತರೀಕೆರೆ: ಬೇಲೇನಹಳ್ಳಿ ಗ್ರಾಮದಲ್ಲಿ ಕಾಡಾನೆಯೊಂದು ಮನು(28) ಎಂಬಾತನ
ಶುಕ್ರವಾರ ರಾತ್ರಿ 9.30ರ ವೇಳೆಗೆ ಮನು ತೋಟಕ್ಕೆ ನೀರು ಹಾಯಿಸಲು ಹೋದಾ
ಮುಂದಕ್ಕೆ ಹೋಗಿದೆ. ಆನೆ ದಾಳಿಯಿಂದ ಯುವಕನ ಸೊಂಟ, ಕೈಕಾಲುಗಳಿಗೆ ಗ
ಆನೆ ತೀವ್ರವಾಗಿ ದಾಳಿ ಮಾಡದೆ ಹಾಗೇ ಮುಂದಕ್ಕೆ ಹೋದ ಪರಿಣಾಮ ಪ್ರಾಣಾ

# ತಂತ್ರಾಂಶದಲ್ಲಿ ಬೆಳೆಗಳ ಬೆಲೆ

## ಜ. 1ರಿಂದ ವೆಬ್‌ಸೈಟ್‌ನಲ್ಲಿ ವಿವರ | ಕೃಷಿ ಬೆಲೆ ಆಯೋಗದ ಅಧ್ಯಕ್ಷ ಮಾಹಿತಿ

■ ವಿಜಯವಾಣಿ ಸುದ್ದಿಜಾಲ ತೀರ್ಥಹಳ್ಳಿ

ತಂತ್ರಾಂಶದ ಮೂಲಕ ಮುಂದಿನ 6 ತಿಂಗಳಿಗೆ 26 ಬೆಳೆಗಳ ಬೆಲೆ ಅಂದಾಜು ಸಮಗ್ರ ಪಟ್ಟಿಯನ್ನು ಅಭಿವೃದ್ಧಿಪಡಿಸಲಾಗಿದೆ. ಜನವರಿ 1ರಿಂದ ಆಯೋಗದ ವೆಬ್‌ಸೈಟ್‌ನಲ್ಲಿ ಬೆಲೆಯ ಮಾಹಿತಿ ಪಡೆಯಬಹುದು ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ ಹೇಳಿದರು.

ಪ್ರಸಕ್ತ ಸಾಲಿನ ಬೆಳೆ ಉತ್ಪಾದನೆ, ಬೆಲೆಯ ಏರಿಳಿತ ಸೇರಿದಂತೆ ಸಮಗ್ರ ಮಾಹಿತಿಯನ್ನು ಡಿ. 29ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಮುಂದಿನ 6 ತಿಂಗಳಲ್ಲಿ ಭತ್ತ, ರಾಗಿ, ಕಡಲೆ, ಹತ್ತಿ ಬೆಳೆಗೆ ಉತ್ತಮ ಧಾರಣೆ ಸಿಗುವ ಸಾಧ್ಯತೆ ಇದೆ. ತೊಗರಿ, ಶೇಂಗಾ, ಮೆಕ್ಕೆಜೋಳ, ಸೋಯಾ, ದವಸಧಾನ್ಯಗಳಾದ ಹೆಸರು, ಉದ್ದು ಬೆಲೆ ಕುಸಿಯುವ ಸಾಧ್ಯತೆ ಹೆಚ್ಚಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಸಾಧ್ಯವಿಲ್ಲ. ಸಾರ್ವಜನಿಕ ಪಡಿತರ ವಿತರಣೆ ಕ್ರಮದಲ್ಲಿ ಮೆಕ್ಕೆಜೋಳ ಬಳಸಬೇಕು ಎಂಬ ಕೇಂದ್ರ ಸರ್ಕಾರದ ಸೂಚನೆ ತೊಡಕು ಉಂಟುಮಾಡಿದೆ. ಬೆಂಬಲ ಬೆಲೆ ಘೋಷಣೆಯನ್ನು ಕಾನೂನು ಕ್ರಮದ ವ್ಯಾಪ್ತಿಗೆ ತಂದು ಇದನ್ನು ಉಲ್ಲಂಘಿಸುವವರ ವಿರುದ್ಧ ಕ್ರಮ ಜರುಗಿಸುವ ಅಗತ್ಯವಿದೆ ಎಂದರು.

ಕೃಷಿ ಉತ್ಪನ್ನಗಳ ಬೆಂಬಲಬೆಲೆಗೆ ಕಾನೂನಿನ ರಕ್ಷಣೆಯ ಅಗತ್ಯವಿದೆ. ಆದ್ದರಿಂದ ಅಗತ್ಯ ವಸ್ತುಗಳ ಖರೀದಿಗೆ ಕೇಂದ್ರ ಸರ್ಕಾರ ಮತ್ತು ಕೃಷಿ ಮಾರುಕಟ್ಟೆ ನಿಯಮಕ್ಕೆ ರಾಜ್ಯ ಸರ್ಕಾರಗಳು ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ತಿಳಿಸಿದರು.

ಜಿಎಸ್‌ಟಿ ಮತ್ತು ನೋಟು ನಿಷೇಧದ ಪರಿಣಾಮ ಮಾರುಕಟ್ಟೆ ಸುಧಾರಣೆಗೆ ಎಪಿಎಂಸಿಗಳು ಶ್ರಮಿಸಬೇಕಿದೆ. ಭತ್ತದ ಕೃಷಿ ಪ್ರೋತ್ಸಾಹಕ್ಕಾಗಿ ಭತ್ತ ಉತ್ಪಾದಕ ಸಂಘಗಳನ್ನು ರಚಿಸಲಾಗುತ್ತದೆ. ಜನವರಿ 3ನೇ ವಾರ ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಿಜಯವಾಣಿ ಚಿತ್ರ



ಮಾರುಕಟ್ಟೆ ಸಪ್ತಾಹ ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಅಡಕೆ ಪ್ರಕೋಷ್ಠದ ಸಂಚಾಲಕ ಆರಗ ಜ್ಞಾನೇಂದ್ರ ಮಾತನಾಡಿದರು.

## ಕೃಷಿ ಬೆಲೆ ಆಯೋಗದ ಶಿಫಾರಸು ಜಾರಿ ಮಾಡಿ

ತೀರ್ಥಹಳ್ಳಿ: ಕೃಷಿ ಬೆಲೆ ಆಯೋಗದ ಶಿಫಾರಸನ್ನು ಸರ್ಕಾರ ಜಾರಿ ಮಾಡಬೇಕು ಎಂದು ಮಾಜಿ ಶಾಸಕ ಹಾಗೂ ರಾಜ್ಯ ಬಿಜೆಪಿ ಅಡಕೆ ಪ್ರಕೋಷ್ಠದ ಸಂಚಾಲಕ ಆರಗ ಜ್ಞಾನೇಂದ್ರ ಒತ್ತಾಯಿಸಿದರು.

ಎಪಿಎಂಸಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಮಾರುಕಟ್ಟೆ ಸಪ್ತಾಹ-2017 ಕಾರ್ಯಕ್ರಮದಲ್ಲಿ ಮಾತನಾಡಿ, ಅಡಕೆ, ಕಾಳು ಮೆಣಸು ಮುಂತಾದ ಕೃಷಿ ಉತ್ಪನ್ನಗಳ ಮೇಲೆ ರಫ್ತು-ಆಮದು ನೀತಿ ಪರಿಣಾಮ ಬೀರುತ್ತವೆ. ಸರ್ಕಾರಗಳಿಗೆ ರೈತಪರ ಚಿಂತನೆ ಅಗತ್ಯ. ರೈತರು ಮಧ್ಯವರ್ತಿಗಳ ಹಾವಳಿಯಿಂದ ಮುಕ್ತರಾಗುವ ವಾತಾವರಣ ಸೃಷ್ಟಿಯಾಗಬೇಕು ಎಂದರು.

ಸಹಕಾರಿ ಮುಖಂಡರಾದ ಕೆ.ನಾಗರಾಜ ಶೆಟ್ಟಿ, ಮಾರ್ತಾಂಡ, ಹಸಿರುಮನೆ ಮಹಾಬಲೇಶ್ ಮಾತನಾಡಿ, ಭೌಗೋಳಿಕ ಸನ್ನಿವೇಶಕ್ಕನುಗುಣವಾಗಿ ಸರ್ಕಾರ ಮಲೆನಾಡಿನಲ್ಲಿ ಭತ್ತದ ಬೆಳೆಗೆ ಅದರ ಉತ್ಪಾದನೆಗೆ ವೆಚ್ಚವಾಗುವ 2,500 ರೂ. ಬೆಂಬಲ ಬೆಲೆ ನೀಡಬೇಕು. ಕೃಷಿ ಉತ್ಪನ್ನಗಳಿಗೆ ಸೂಕ್ತ ಧಾರಣೆ ಇಲ್ಲದ ಕಾರಣ ಯುವಪೀಳಿಗೆ ಕೃಷಿಯಿಂದ ದೂರವಾಗುತ್ತಿದ್ದು ಮಲೆನಾಡಿನ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ ಎಂದು ಹೇಳಿದರು.

ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿ, ಭತ್ತದ ಬೆಳೆಗೆ ಕೇರಳ ಮಾದರಿ ಪ್ರೋತ್ಸಾಹ ಅಗತ್ಯ. ಪಡಿತರ ವಿತರಣೆಗೆ ರಾಜ್ಯ ಸರ್ಕಾರ ಪಂಜಾಬ್ ಹಾಗೂ ಹರ್ಯಾಣದಿಂದ ಅಕ್ಕಿಯನ್ನು ತರಿಸದೆ ಮಳೆಯಾಶ್ರಿತ ಪ್ರದೇಶದ ಅಕ್ಕಿಯನ್ನು ಖರೀದಿಸಿದರೆ ಭತ್ತಕ್ಕೆ ಹೆಚ್ಚಿನ ಬೆಂಬಲ ಬೆಲೆ ನೀಡಲು ಸಾಧ್ಯ. ಪ್ರಸ್ತುತ ಇರುವ ಬೆಂಬಲ ಬೆಲೆಗಿಂತ ಹೆಚ್ಚಿನ ಧಾರಣೆಯನ್ನು ನೀಡುವುದಕ್ಕೆ ಕೇಂದ್ರದ ಕಟ್ಟುನಿಟ್ಟಿನ ಸೂಚನೆಯೂ ಇದೆ ಎಂದರು.

ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯುವ ಭತ್ತ ಸಿರಿಧಾನ್ಯಕ್ಕೆ ಸಮನಾಗಿದ್ದು ರೈತರು ಜೀರಿಗೆ ಸಣ್ಣದಂತಹ ಬಹುಬೇಡಿಕೆ ಇರುವ ತಳಿಗಳನ್ನು ಅಭಿವೃದ್ಧಿಪಡಿಸಬೇಕು. ಅಡಕೆ ಮಂಡಳಿ ರಚನೆ ಅಗತ್ಯ. ಇದು ಮಲೆನಾಡಿನ ಕೇಂದ್ರವಾಗಿರುವ ಶಿವಮೊಗ್ಗದಲ್ಲಿ ಸ್ಥಾಪನೆಯಾಗಬೇಕು. ಕನಿಷ್ಠ 500 ಕೋಟಿ ರೂ. ಸ್ವಂತ ಬಂಡವಾಳವನ್ನು ಕ್ರೋಡೀಕರಿಸಿಕೊಳ್ಳಬೇಕು ಎಂದು ತಿಳಿಸಿದರು.

ಎಪಿಎಂಸಿ ಅಧ್ಯಕ್ಷ ಕೇಳೂರು ಮಿತ್ರಾ, ಎಪಿಎಂಸಿ ಉಪಾಧ್ಯಕ್ಷೆ ಮೈಥಿಲಿ ಸತೀಶ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಬೀರಣ್ಣ ಹಾಗೂ ಪ್ರಕಾಶ್ ವೇದಿಕೆಯಲ್ಲಿದ್ದರು.

# ಬೆಂಬಲ ಬೆಲೆಗೆ ಕಾಯ್ದೆ ರಚನೆಯಾಗಲಿ

## ತೀರ್ಥಹಳ್ಳಿ: ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಪ್ರಕಾಶ್ ಕಮ್ಮರಡಿ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ: 'ಕಾನೂನಿನ ವ್ಯಾಪ್ತಿಗೆ ಬೆಂಬಲ ಬೆಲೆಯನ್ನು ತರಬೇಕಾಗಿದೆ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಹೊಸದಾಗಿ ಕಾಯ್ದೆ ರಚಿಸಬೇಕು' ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ಅಭಿಪ್ರಾಯಪಟ್ಟರು.

'ಬೆಂಬಲ ಬೆಲೆಗೆ ಕಾನೂನಿನ ರಕ್ಷಣೆ ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಎಪಿಎಂಸಿ ನಿಯಮಕ್ಕೆ ರಾಜ್ಯ ಸರ್ಕಾರ, ಅಗತ್ಯ ವಸ್ತುಗಳ ಖರೀದಿ ನಿಯಮಕ್ಕೆ ಕೇಂದ್ರ ಸರ್ಕಾರ ತಿದ್ದುಪಡಿ ತರಬೇಕಿದ್ದು, ಸಮಗ್ರ ಮಾಹಿತಿ ಒದಗಿಸಲಾಗಿದೆ. ಈ ವರ್ಷದ ಬೆಳೆವಾರು ಬೆಲೆ ಕುರಿತು ಸರ್ಕಾರಕ್ಕೆ ಡಿಸೆಂಬರ್ 29ರಂದು ವರದಿ ಸಲ್ಲಿಸಲಾಗಿದೆ. ಬೆಳೆ ಉತ್ಪಾದನೆ, ಹೆಚ್ಚಳ, ಕುಸಿತ, ಬೆಲೆ ಏರಿಳಿತ ಕುರಿತ ಸಮಗ್ರ ಮಾಹಿತಿ ವರದಿಯಲ್ಲಿದೆ' ಎಂದು ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಮುಂದಿನ ಆರು ತಿಂಗಳಿನಲ್ಲಿ ಭತ್ತ, ರಾಗಿ, ಹತ್ತಿ, ಕಡಲೆ ಬೆಳೆಗೆ ಉತ್ತಮ ಧಾರಣೆ ಸಿಗಬಹುದು. ಮುಸುಕಿನ ಜೋಳ, ತೊಗರಿ, ಶೇಂಗಾ, ಸೋಯಾ, ದವಸ ಧಾನ್ಯಗಳಾದ ಹೆಸರು, ಉದ್ದಿನ ಬೆಲೆ ಕುಸಿಯುವ ಸಾಧ್ಯತೆ ಇದೆ. ಮುಸುಕಿನ ಜೋಳಕ್ಕೆ ಬೆಂಬಲ ನೀಡಲು ಬೆಲೆ ಸಾಧ್ಯವಿಲ್ಲ. ಸಾರ್ವಜನಿಕ ಪಡಿತರ ವಿತರಣೆಯಲ್ಲಿ ಮುಸುಕಿನ ಜೋಳವನ್ನು ಬಳಸಬೇಕು ಎಂಬ ಕೇಂದ್ರ ಸರ್ಕಾರದ ಸೂಚನೆ ತೊಡಕುಂಟುಮಾಡಿದೆ' ಎಂದು ಡಾ.ಪ್ರಕಾಶ್ ಕಮ್ಮರಡಿ ಹೇಳಿದರು.



ಡಾ.ಪ್ರಕಾಶ್ ಕಮ್ಮರಡಿ

ಎಪಿಎಂಸಿಗಳು ಪೈಪೋಟಿಯಿಂದ ಕೂಡಿದ ಮಾರುಕಟ್ಟೆ ನಿರ್ಮಾಣಕ್ಕೆ ಹೆಚ್ಚು ಆಸಕ್ತಿ ವಹಿಸಬೇಕು. ಜಿಎಸ್‌ಟಿ, ನೋಟು ರದ್ದತಿಯಿಂದ ಅನೇಕ ತೊಂದರೆ ಉಂಟಾಗಿದ್ದು, ಸುಧಾರಣೆ ಅಗತ್ಯವಾಗಿದೆ. ರಾಜ್ಯ ಕೃಷಿ ಬೆಲೆ ಆಯೋಗದ ಕಾರ್ಯನಿರ್ವಹಣೆಗೆ ಕೇಂದ್ರ ನೀತಿ ಆಯೋಗ ಪ್ರಶಂಸೆ ವ್ಯಕ್ತಪಡಿಸಿದೆ. ರಾಷ್ಟ್ರ ವ್ಯಾಪಿ ರಚನೆಗೆ ಸೂಚನೆ ನೀಡಿದೆ. ಮೈಕ್ರೋಸಾಫ್ಟ್ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ತಂತ್ರಾಂಶದಿಂದ ಮುಂದಿನ ಆರು ತಿಂಗಳಿಗೆ 26 ಬೆಳೆಗಳ ಬೆಲೆ ಅಂದಾಜು ಸಮಗ್ರ ಪಟ್ಟಿ ಅಭಿವೃದ್ಧಿಪಡಿಸಲಾಗಿದೆ. ಜ.1ರಿಂದ ಆಯೋಗದ ವೆಬ್‌ಸೈಟ್‌ನಲ್ಲಿ ಬೆಲೆ ಕುರಿತು ಮಾಹಿತಿ ಪಡೆಯಬಹುದು ಎಂದು ಪ್ರಕಾಶ್ ಹೇಳಿದರು.

'ಸರ್ಕಾರ ಗ್ರಾಹಕರ ಸ್ಥಿತಿಯನ್ನು ಮಾತ್ರ ಗಮನಿಸಿದರೆ ಸಾಲದು. ರೈತರ ಬಗ್ಗೆಯೂ ಗಮನ ಹರಿಸಬೇಕು. ಬೆಲೆ ಏರಿದ ತಕ್ಷಣ ಬೆಲೆ ಇಳಿಕೆಗೆ ಸರ್ಕಾರ ಈರುಳ್ಳಿಯನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡಿದರೆ ದೇಶದ ರೈತರಿಗೆ ಅನ್ಯಾಯವಾಗುತ್ತದೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ಅಡಿಕೆ ಬೆಂಬಲ ಬೆಲೆ ಘೋಷಿಸಿ ಧಾರಣೆ ಕುಸಿಯದಂತೆ ತಡೆಯಲಾಗಿದೆ ಎಂದು ಅವರು ಹೇಳಿದರು.

ರಾಜ್ಯದಲ್ಲಿ 10 ವರ್ಷದಿಂದೀಚೆಗೆ ಶೇ 32ರಷ್ಟು ಭತ್ತ ಬೆಳೆ ಕುಸಿತ ಕಂಡಿದೆ. 4.7 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈಗ ಬೆಳೆಯುತ್ತಿಲ್ಲ. ದೇಸಿ ತಳಿ ಸಂರಕ್ಷಣೆಗಾಗಿ ಕೇರಳ ಮಾದರಿ ಪ್ಯಾಕೇಜ್ ಘೋಷಣೆಗೆ ಬೇಡಿಕೆ ಸಲ್ಲಿಸಲಾಗಿದೆ. ಅಡಿಕೆ, ಕಾಳು ಮೆಣಸು ಖರೀದಿಗೆ ಆನ್‌ಲೈನ್ ಟ್ರೇಡಿಂಗ್ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕೃಷಿ, ತೋಟಗಾರಿಕಾ ಇಲಾಖೆಯ ಯೋಜನೆಗಳು ರೈತರಿಗೆ ತಲುಪಿಸುವ ಸಲುವಾಗಿ ರೈತರ ಆದಾಯ ಮತ್ತು ರೈತ ಕುಟುಂಬಗಳ ಕಲ್ಯಾಣವೃದ್ಧಿ ಪೈಲೆಟ್ ಯೋಜನೆ ಹಮ್ಮಿಕೊಳ್ಳಲಾಗುತ್ತದೆ. ಭತ್ತ ಕೃಷಿ ಪ್ರೋತ್ಸಾಹಕ್ಕಾಗಿ ಭತ್ತ ಉತ್ಪಾದಕ ಸಂಘಗಳನ್ನು ರಚಿಸಲಾಗುತ್ತದೆ. ಜನವರಿ 3ನೇ ವಾರ ಬೆಂಗಳೂರಿನಲ್ಲಿ ಅಂತರ ರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಎಪಿಎಂಸಿ ಅಧ್ಯಕ್ಷ ಕೇಳೂರು ಮಿತ್ರ, ಉಪಾಧ್ಯಕ್ಷೆ ಮೈಥಿಲಿ ಸತೀಶ್, ನಿರ್ದೇಶಕ ಹಸಿರುಮನೆ ಮಹಾಬಲೇಶ್, ಕೃಷಿ, ತೋಟಗಾರಿಕಾ ಇಲಾಖೆ ಅಧಿಕಾರಿಗಳು ಹಾಜರಿದ್ದರು.